 ಅಸಲು ದಾವಾ ಸಂಖ್ಯೆ.132/2022

ಪಿ.ಡಬ್ಲು. 1

**ಸಾಕ್ಷಿಯನ್ನು ದಿನಾಂಕಃ 26.07.2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಎ.ಎಸ್.ವಾಯ್., ವಾದಿ ಪರ ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಇರುವ ಅಂಶಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ ಮತ್ತು ಸದರೀ ಅಂಶಗಳು ಸತ್ಯವಾಗಿರುತ್ತವೆ. ಅದರಲ್ಲಿ ನನ್ನ ಸಹಿ ಇದೆ.**

ಈ ದಿನ ನಾನು ದಾವೆಗೆ ಸಂಬಂಧಿಸಿದಂತೆ

1) ದಿನಾಂಕಃ 12.08.2021 ರ ಉತ್ತೂರ ಗ್ರಾಮದ ರಿ.ಸ. ನಂ.124/1 ರ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿ.ಪಿ. 1 ಎಂದು ಗುರುತಿಸಲಾಯಿತು.

2) ದಿನಾಂಕಃ 10.08.2020 ರ ಡೈರಿ ಸಂಖ್ಯೆಃ 959 ರ ದೃಡಿಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ. 2 ಎಂದು ಗುರುತಿಸಲಾಯಿತು.

3) ದಿನಾಂಕಃ 05.08.2022 ರಂದು ಮುಧೋಳ ಪೋಲಿಸ ಇವರು ನೀಡಿದ ಎಲಪಿಟಿ ನಂ.262/2022 ರ ಸ್ವಿಕೃತಿ ಹಾಜರುಪಡಿಸಿದ್ದು ಅದನ್ನು ನಿ.ಪಿ. 3 ಎಂದು ಗುರುತಿಸಲಾಯಿತು.

4) ದಾವಾ ಸ್ವತ್ತಿಗೆ ಸಂಬಂಧಿಸಿಂತೆ 4 ಪೋಟೋ ಮತ್ತು 1 ಸಿಡಿ ಹಾಜರುಪಡಿಸಿದ್ದು (ಅವುಗಳನ್ನು ಪ್ರತಿವಾದಿಯ ತಕರಾರು ಸದರಿ ಪೋಟೋ ಮತ್ತು ಸಿಡಿ ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎನ್ನು ತಕಾರಿಗೆ ಒಳಪಟ್ಟು) ಅವುಗಳನ್ನು ಕ್ರಮವಾಗಿ ನಿ.ಪಿ. 4 ರಿಂದ 9 ಎಂದು ಗುರುತಿಸಲಾಯಿತು.

5) ದಿನಾಂಕಃ 06.08.2022 ರಂದು ವಾದಿಯು ಹೆಸ್ಕಾ ಅಧಿಕಾರಿಯವರಿಗೆ ನೀಡಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 10 ಎಂದು ಗುರುತಿಸಲಾಯಿತು.

6) ದಿನಾಂಕಃ 03.01.2023 ರಂದು ತಹಶೀಲ್ದಾರ ಕಛೇರಿ ಮುಧೋಳ ಇವರು ನನಗೆ ನೀಡಿದ ಪತ್ರ ಹಾಜರುಪಡಿಸಿರುತ್ತೇನೆ.

ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ